**ಓಎಸ್. ನಂ.*268/2022***

**ಪಿಡಬ್ಲ್ಯೂ:*01***

**ಇಂದು ದಿನಾಂಕ*: 23-09-2025* ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದಃ**

ಪಿರಿಯಾಪಟ್ಟಣ ತಾಲೂಕು, ಕಾಮನಹಳ್ಳಿ ಗ್ರಾಮದ ಸರ್ವೆ ನಂ.10/2 ನನ್ನ ತಾಯಿಯ ಹೆಸರಿನಲ್ಲಿದೆ ಎಂದರೆ ಸರಿಯಲ್ಲ. ನನ್ನ ತಾಯಿ ತೀರಿಕೊಂಡ ನಂತರ ಪ್ರತಿವಾದಿ 1, 2 ಮತ್ತು 5 ರವರು ಪೌತಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಕಾಮನಹಳ್ಳಿಯಲ್ಲಿ ನನ್ನ ತಂದೆಗೆ ಒಟ್ಟು ಎಷ್ಟು ಆಸ್ತಿ ಇತ್ತು ಎಂದು ನನಗೆ ಗೊತ್ತಿಲ್ಲ. 2002 ರಲ್ಲಿ ನನ್ನ ತಂದೆ ಅಣ್ಣೇಗೌಡ ಹಾಗೂ ಕಾಳೇಗೌಡರವರಿಗೆ ಸರ್ವೆ ನಂ. 21/ಪಿ 3 ರಲ್ಲಿ ಮಾರಾಟ ಮಾಡಿದ್ದಾರೆ. ನನ್ನ ತಂದೆ ಒಂದು ಸಾರಿ 2 ಎಕರೆ 7 ಗುಂಟೆ ಹಾಗೂ ಇನ್ನೊಂದು ಸಾರಿ 17 ಗುಂಟೆ ಮಾರಾಟ ಮಾಡಿದ್ದಾರೆ. ನಿಪಿ 14 ರ ದಾಖಲೆಯಲ್ಲಿ ಸರ್ವೆ ನಂ. 21/ಪಿ 3 ಮಾತ್ರ ಬರೆದಿದೆ. ನನ್ನ ತಂದೆ ಸರ್ವೆ ನಂ. 21/ಪಿ 3 ನ್ನು ರೂ.79,000 ರೂಗಳಿಗೆ ಮಾರಾಟ ಮಾಡಿದ್ದಾರೆ. ಕಂಪಲಾಪುರದಲ್ಲಿರುವ ಜಮೀನನ್ನು ನನ್ನ ತಂದೆ ರೂ 3,00,000 ಗಳಿಗೆ ಖರೀದಿಸಿರುತ್ತಾರೆ. ರೂ.79,000 ಮಾರಾಟ ಮಾಡಿ ರೂ.3,00,000 ಗಳಿಗೆ ಜಮೀನು ಖರೀದಿಸಬೇಕಾದರೆ ಉಳಿಕೆ ಹಣ ಎಲ್ಲಿಂದ ಬಂತು ಎಂದರೆ ನನ್ನ ತಂದೆ ವ್ಯವಸಾಯ ಮಾಡಿ ಅಲ್ಪ ಸ್ವಲ್ಪ ಹಣ ಇಟ್ಟುಕೊಂಡಿದ್ದರು. ನನ್ನ ತಂದೆ ಮಾರಾಟ ಮಾಡಿರುವ ಸರ್ವೆ ನಂ. 21 / ಪಿ 3 ಅವರ ಸ್ವಯಾರ್ಜಿತ ಆಸ್ತಿ ಆಗಿತ್ತು. 2002 ರಲ್ಲಿ ನಾನು ಪ್ರಾಪ್ತ ವಯಸ್ಕಳಾಗಿದ್ದೆ ಎಂದರೆ ಸರಿ . ನನ್ನ ತಂದೆ ಮಾರಾಟ ಮಾಡಿದಾಗ ನನಗೆ ಗೊತ್ತಿರಲಿಲ್ಲ. ನನ್ನ ತಂದೆ ಮಾರಾಟ ಮಾಡಿರುವ ವಿಷಯ 3 ತಿಂಗಳ ಹಿಂದೆ ನನಗೆ ಗೊತ್ತಾಯಿತು. ನನ್ನ ತಂದೆ ಮಾರಾಟ ಮಾಡಿರುವ ಆಸ್ತಿಗಳೆಲ್ಲವೂ ಪಿತ್ರಾರ್ಜಿತ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ಕೆಲವು ಪಿತ್ರಾರ್ಜಿತ ಆಸ್ತಿಗಳನ್ನು ಮಾರಾಟ ಮಾಡಿ ನನ್ನ ತಂದೆ ಕೆಲವು ಆಸ್ತಿಗಳನ್ನು ಖರೀದಿಸಿದ್ದರು. ನನ್ನ ತಂದೆಗೆ ಯಾವ ಯಾವ ಸರ್ವೆ ನಂಬರುಗಳಲ್ಲಿ ಪಿತ್ರಾರ್ಜಿತ ಆಸ್ತಿಗಳು ಇತ್ತು ಎಂದು ಹೇಳಲು ನನಗೆ ಗೊತ್ತಿಲ್ಲ.

**ಓಎಸ್. ನಂ.*268/2022***

**ಪಿಡಬ್ಲೂ:*01***

ಕಾಮನಹಳ್ಳಿ ಸರ್ವೆ ನಂ.40/10 ರಲ್ಲಿ ನಮ್ಮ ಕುಟುಂಬಕ್ಕೆ ಜಮೀನು ಇತ್ತು. ಈಗ ಆ ಜಮೀನು ಕಾಳೇಗೌಡರ ಹೆಸರಿನಲ್ಲಿ ಇದೆ. ನನ್ನ ತಂದೆ ಮಾರಾಟ ಮಾಡಿರುವ ಜಮೀನುಗಳನ್ನು ಈ ಕೇಸಿನಲ್ಲಿ ಸೇರಿಸಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಮಾರಾಟ ಮಾಡಿರುವ ಜಮೀನುಗಳು ಎಲ್ಲ ಅವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ನನ್ನ ತಂದೆಗೆ ಪಿತ್ರಾರ್ಜಿತವಾಗಿ ಒಂದು ಗುಂಟೆ ಜಮೀನು ಸಹ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ದನ, ಕರುಗಳ ವ್ಯಾಪಾರ ಮಾಡಿ ಬಂದ ಹಣದಿಂದ ಆಸ್ತಿಗಳನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. ಕಾಮನಹಳ್ಳಿ ಸರ್ವೆ ನಂ. 10/2 ರಲ್ಲಿ ಈಗಲೂ ಸಹ ಪ್ರತಿವಾದಿಗಳ ಹೆಸನರಿಲ್ಲಿ ಇದ್ದರೂ ಸಹ ಉದ್ದೇಶಪೂರ್ವಕವಾಗಿ ಅದನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ಶಾಲಾ ದಾಖಲಾತಿಗಳ ಪ್ರಕಾರ ದಾವಾ ಸಲ್ಲಿಸುವ ಕಾಲಕ್ಕೆ ನನಗೆ 52 ವರ್ಷ ಆಗಿದ್ದರೂ ಸಹ 41 ವರ್ಷ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**

**ಪಿರಿಯಾಪಟ್ಟಣ**